ಒಂದು ಜಿಲ್ಲೆಗೆ ಸಂಬಂಧಪಟ್ಟ ಶಾಸಕರ ಹೆಸರುಗಳನ್ನು ವಿಶೇಷ ಆಹ್ವಾನಿತರು ಎಂದು ಹಾಕಿದ್ದರು. ಆಗ ನಾವು ಬೆಂಗಳೂರಿನಲ್ಲೆ ಇದ್ದೆವು. ಆ ಕಾರ್ಡ್ ನಮ್ಮ ಗಮನಕ್ಕೆ ಬಂದ ಮೇಲೆ ಆಗಿದ್ದಾಗ್ಗೆ ನಾನು ಮತ್ತು ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ರಮೇಶ್ ಜಿಗಜಿಣಗಿಯವರು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ಕಾರ್ಡ್‌ನ್ನು ತಕ್ಷಣ ಬದಲಾವಣೆ ಮಾಡಿ ಅದರಲ್ಲಿ ವಿಶೇಷ ಆಹ್ವಾನಿತರು ಎನ್ನುವುದನ್ನು ತೆಗೆದು ಅತಿಥಿಗಳು ಎಂದು ಹಾಕಬೇಕೆಂದು ಆದೇಶ ಕೊಟ್ಟಮೇಲೆ ಅಲ್ಲಿ ಬೇರೆ ಕಾರ್ಡ್ ಪ್ರಿಂಟ್ ಮಾಡಿ ಹಂಚಿದ್ದು ಆಗಿದೆ. ಮಾನ್ಯ ಸದಸ್ಯರು ಇನ್ನೊಂದು ವಿಚಾರವಾಗಿ ಹೇಳುತ್ತಾ ಅಲ್ಲಿ ಕಲ್ಲಿನ ಮೇಲೆ ಹೆಸರು ಇಲ್ಲವೆಂದು ಹೇಳಿದರು. ಅವತ್ತು ಮಾನ್ಯ ಮುಖ್ಯಮಂತ್ರಿಗಳು ರಾತ್ರಿ ಅಲ್ಲಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಕಲ್ಲಿನ ಮೇಲೆ ಎಲ್ಲಾಶಾಸಕರ ಹೆಸರುಗಳನ್ನು ಹಾಕಿದ್ದೇವೆ. ಆದರೆ ಡಿ.ಸಿ. ಆಫೀಸ್ ಮತ್ತು ಎಸ್.ಪಿ. ಆಫೀಸ್ ಏನು ಉದ್ಘಾಟನೆ ಮಾಡಿದ್ದಾರೆ ಅಲ್ಲಿ ಏನಾಯಿತು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ಕೇವಲ ಆಫೀಸ್ ಉದ್ಘಾಟನೆ ಮಾಡಿ ಹೋಗಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೆವು. ಆದರೆ ಕೊನೆ ಗಳಿಗೆಯಲ್ಲಿ ಇಲ್ಲ ಅಲ್ಲಿ ಒಂದು ಕಲ್ಲನ್ನು ಹಾಕಿ ಅದನ್ನು ಉದ್ಘಾಟನೆ ಮಾಡಬೇಕೆಂದು ಹೇಳಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಇಲ್ಲ, ಅದು ಗಡಿಬಿಡಿಯಾಯಿತು, ಈಗ ಎಲ್ಲಾ ಅದಕ್ಕೆ ಬರೆಸಿ ಹಾಕಿಸಿದ್ದೆವು, ಅದಕ್ಕೋಸ್ಕರ ಅದನ್ನು ಚೇಂಜ್ ಮಾಡಿ ಎಲ್ಲಾ ಈ ಜಿಲ್ಲೆಗೆ ಸಂಬಂಧಪಟ್ಟ ಶಾಸಕರ ಹೆಸರುಗಳನ್ನು ಹಾಕುವುದಕ್ಕೆ ನಾನು ಹೇಳಿದ್ದೇನೆ.

(ಋ) ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ನಡೆದಿರುವ ಸಣ್ಣ ಮಕ್ಕಳ ಕೊಲೆಗಳು

+ ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ): ಮಾನ್ಯ ಅಧ್ಯಕ್ಷರೇ, ಈ ವರ್ಷದ ಏಪ್ರಿಲ್ 29ರಂದು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ಸುಮಾರು ಗ್ರಾಮದಲ್ಲಿ ಎರಡು ಪುಟ್ಟ ಮಕ್ಕಳ ಕೊಲೆಯಾಗಿದೆ. ಆ ಪುಟ್ಟ ಇಬ್ಬರು ಮಕ್ಕಳನ್ನು ಕತ್ತು ಹಿಚುಕಿ ಕೊಲೆಗೈದಿದ್ದಾರೆ. ಸಾವೂರು ಗ್ರಾಮದ ಕೊಳೆಬೈಲು ಎಂಬಲ್ಲಿ ನಾರಾಯಣ್ ಅವರ ಪುತ್ರ ಯಶವಂತ, 10 ವರ್ಷ ಪ್ರಾಯ, ಮತ್ತು ಅವರ ನೆರೆಮನೆಯ ಮಗು ಸಂಗೀತ, ಬೈರಪ್ಪನವರ ಮಗಳು, 14ವರ್ಷ ಪ್ರಾಯ. ಇಡೀ ಜಿಲ್ಲೆಯಲ್ಲಿ ಆ ಪುಟ್ಟ ಮಕ್ಕಳ ಕೊಲೆ ಜಿಲ್ಲೆಯನ್ನು ನಡುಗಿಸಿದೆ. ಕಾರಣ ಅಲ್ಲಿ ಕಾವೇರಿ ಹುಟ್ಟಿದ ಜಾಗ. ಅಲ್ಲಿ ಕೊಲೆ ನಡೆದು ಇಡೀ ಜಿಲ್ಲೆಯನ್ನು ತಲ್ಲಣಗೊಳಿಸಿದೆ. ಆದರೆ ಅದು ಕೊಲೆಯಾಗಿ ನಾಲ್ಕು ತಿಂಗಳಾದನಂತರ ಇಲ್ಲಿಯವರೆಗೂ ಸಹ ಪೊಲೀಸ್ ಅಧಿಕಾರಿಗಳು ವಿಚಾರಣೆ ಮಾಡುತ್ತಿದ್ದರೂ ಸಹ, ಇನ್ನೊಂದು ದುರಂತವಾಯಿತು ಎಂದರೆ ನಾರಾಯಣ್ ಎನ್ನುವವರ ತಂಗಿ, ಆಕೆಯನ್ನು ವಿಚಾರಣೆಗೆ ಜೂನ್ 17ರಂದು ಕರೆದುಕೊಂಡು ಹೋಗಿದ್ದು ಜೂನ್ 20ರವರೆಗೆ ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟುಕೊಂಡು ಜೂನ್ 22ರಂದು ಒಂದು ಹೆಣ ಸಿಗುತ್ತದೆ. ಅದು ನಾರಾಯಣ್‌ರವರ ತಂಗಿ. ಅವಳು ಈ ಮಕ್ಕಳನ್ನು ಕೊಲೆ ಮಾಡಿರಬಹುದು ಎಂದು ಹೇಳಿ ಅವಳ ಶವ ಅಪರಿಚಿತ ಶವ ಎಂದು

ಹೇಳಿ ಮಡಕೇರಿಯಲ್ಲಿ ಸಿಗುತ್ತದೆ. ಅದಾದನಂತರ ಪೊಲೀಸರು ಮತ್ತು ಮುನಿಸಿಪಾಲಿಟಿಯವರು ಶವಸಂಸ್ಕಾರ ಮಾಡುತ್ತಾರೆ. 10 ದಿವಸದ ನಂತರ ಇವಳೇ ಮಾಚಮ್ಮ ಈ ಮಕ್ಕಳನ್ನು ಕೊಲೆ ಮಾಡಿದವಳು ಎಂದು ಆಪಾದನೆಯಾಗುತ್ತದೆ. ಆದರೆ ಆತ್ಮಹತ್ಯೆ ಮಾಡಿಕೊಂಡಳು. ಆದರೆ ಸನ್ಮಾನ್ಯ ಶಂಕರಲಿಂಗೇಗೌಡರು ಹೇಳಿದ ಹಾಗೆ ಅವರ ಕೈ ಕುತ್ತಿಗೆಯಲ್ಲಿ ಇರುವುದಿಲ್ಲ. ಅವರ ಕೈ ಎದೆಮೇಲೆ ಇರುವುದಿಲ್ಲ. ಆ ರೀತಿ ಸಂಶಯಾಸ್ಪದವಾಗಿ ಅಪರಿಚಿತ ಮಹಿಳೆ ಮೇಲೆ ಕೊಲೆ ಆಪಾದನೆ ಹಾಕುತ್ತಾರೆ. ಮತ್ತು ಆ ಪ್ರಕರಣವನ್ನು ಮುಚ್ಚುವುದಕ್ಕೆ ನೋಡುತ್ತಾರೆ. ಎರಡು ಮಕ್ಕಳ ಕೊಲೆ ಜೊತೆಗೆ ಇನ್ನೊಂದು ಮೂರನೇ ಕೊಲೆಯಾಗಿದೆ. ಈ ರೀತಿ ಜಿಲ್ಲೆಯಲ್ಲಿ ಸದನ ಪ್ರಾರಂಭವಾದನಂತರ ಐದು ಕೊಲೆಗಳು ನಡೆದುಹೋಯಿತು. ನಮ್ಮ ಜಿಲ್ಲೆಯಲ್ಲಿ ಪೊಲೀಸರ ವ್ಯವಸ್ಥೆ ಹೇಗಿದೆ ಎಂದು ಏನೂ ಅರ್ಥವಾಗುತ್ತಿಲ್ಲ. ಇಡೀ ಜಿಲ್ಲೆಯಲ್ಲಿ ಇವತ್ತು ಏನಾಗಿದೆಯೆಂದರೆ ಇವತ್ತು ಆ ಪುಟ್ಟ ಮಕ್ಕಳನ್ನು ಕೊಂದಿದ್ದಕ್ಕಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ? ದಯವಿಟ್ಟು ಇದಕ್ಕೆ ಸಿ.ಓ.ಡಿ. ತನಿಖೆಯಾಗಬೇಕೆಂದು ಹೇಳುತ್ತೇನೆ. ಕಾರಣ ಎರಡು ಕೊಲೆ ಜೊತೆಗೆ ಇನ್ನೊಂದು ಸಂಶಯದ ಕೊಲೆಯಾಗಿದೆ. ಇದು ಒಂದು ಕೊಲೆ ಸರಣಿ ನಡೆಯುತ್ತಿದೆ. ದಯವಿಟ್ಟು ಇದನ್ನು ಸಿ.ಓ.ಡಿ. ತನಿಖೆಗೆ ಹಾಕಬೇಕೆಂದು ಕೇಳುತ್ತೇನೆ.

+ ಶ್ರೀ ಆರ್.ರೋಷನ್ ಬೇಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಜೀವನಕುಮಾರಿ 14 ವರ್ಷ ಹುಡುಗಿ ಡಾಟರ್ ಆಫ್ ಬೈರಪ್ಪ ಮತ್ತು ಯಶವಂತ 11 ವರ್ಷದ ಹುಡುಗ ನಾರಾಯಣ ಎನ್ನುವವರ ಮಕ್ಕಳು 29ನೇ ತಾರೀಖು ರಾತ್ರಿ ಕೊಲೆಯಾಗುತ್ತದೆ. ಇದರಲ್ಲಿ ಒಂದು ಕೇಸ್ ಪೇಜ್ ನಂಬರ್ 41:97 ಸೆಕ್ಷನ್ 302ರ ಪ್ರಕಾರ ಕೇಸ್ ರಿಜಿಸ್ಟರ್ ಆಗಿದ್ದು ನಿಜ. ಜೊತೆಗೆ ಡೌಟ್ ಯಾರಮೇಲೆ ಬರುತ್ತದೆಯೆಂದರೆ ಶ್ರೀಮತಿ ಮಾಚಮ್ಮ, ನಾರಾಯಣ್ ಅವರ ಸಿಸ್ಟರ್ ಅವರನ್ನು ಪೊಲೀಸರು ಅರೆಸ್ಟ್ ಮಾಡುತ್ತಾರೆ. ಜೂನ್ 21ನೇ ತಾರೀಖು ಯು.ಟಿ.ಆರ್. ನಂಬರ್ 10:97 ಅಂಡರ್ ಸೆಕ್ಷನ್ 174ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದ್ದೇವೆ. **Systematic investigation is in progress.** ಹೋದ ವಾರ ಶ್ರೀ ಎಂ.ಸಿ.ನಾಣಯ್ಯ, ಜಿಲ್ಲಾ ಉಸ್ತುವಾರಿ ಸಚಿವರು, ಮಡಿಕೇರಿಗೆ ಹೋದಾಗ ಈ ಕೇಸ್‌ನ್ನು ಸಿ.ಓ.ಡಿ.ಗೆ ರೆಫರ್ ಮಾಡಬೇಕೆಂದು ವಿನಂತಿಯನ್ನು ಮಾಡಿದಾಗ, ಅಲ್ಲಿ ಗೃಹ ಸಚಿವರ ಜೊತೆಯಲ್ಲಿ ಮಾತನಾಡಿ ಸಿ.ಓ.ಡಿ.ಗೆ ರೆಫರ್ ಮಾಡಿಸುತ್ತೇನೆಂದು ಹೇಳಿದ್ದರು. ಈಗ ಮೊನ್ನೆ ಸಚಿವರು ನನ್ನ ಜೊತೆಯಲ್ಲಿ ಮಾತನಾಡಿದರು. ನಾನು ಈಗಾಗಲೇ ಸಿ.ಓ.ಡಿ.ಗೆ ರೆಫರ್ ಮಾಡಿ ಬಿಟ್ಟಿರುತ್ತೇನೆ.